## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.75-2022** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಚಿಕ್ಕನಾಯಕ<br>ಇಬ್ಜಾಲ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 31-08-2024.** |

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ.ಎನ್.ಆರ್ ರವರಿಂದಃ-**

ನನ್ನ ತಂದೆ ವ್ಯವಸಾಯ ಮಾಡುತ್ತಾರೆ. ನನ್ನ ತಂದೆಯವರು ಸುಮಾರು 1 ವರ್ಷಗಳಿಂದ ವ್ಯವಸಾಯದ ಕೆಲಸಗಳನ್ನು ಮಾಡುತ್ತಿರುವುದಿಲ್ಲ. ನನ್ನ ತಂದೆಯರಿಗೆ ಮಂಡಿನೋವು ಇರುತ್ತದೆ. ನನ್ನ ತಂದೆಯವರಿಗೆ ಮಂಡಿ ನೋವು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ತಂದೆಯವರು ಆರೋಗ್ಯವಾಗಿ ಇದ್ದರೂ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಿದ್ದ ಪಕ್ಷದಲ್ಲಿ ನಿಜಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ನಾನು ಅವರಿಂದ ಸಾಮಾನ್ಯ ಅಧಿಕಾರ ಪತ್ರವನ್ನು ಪಡೆದುಕೊಂಡು ನ್ಯಾಯಾಲಯದಲ್ಲಿ  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆಯವರು ಪ್ರತಿವಾದಿಗಳ ವಿರುದ್ಧ ರಸ್ತೆ ವಿಚಾರವಾಗಿ ಈ ದಾವಾವನ್ನು ಸಲ್ಲಿಸಿರುತ್ತಾರೆ. ನಾನು 1979 ರಲ್ಲಿ ಜನಿಸಿರುತ್ತೇನೆ. ನಾನು ದಿ.25/11/1972 ರ ಕ್ರಯ ಪತ್ರವನ್ನು ಖುದ್ದಾಗಿ ನೋಡಿರುತ್ತೇನೆ. ನನ್ನ ತಂದೆಯವರು ದಾವಾ ಅನುಸೂಚಿ ಸ್ವತ್ತುಗಳು ಎಂದು ಸುಮಾರು 7 ಸ್ವತ್ತುಗಳನ್ನು ನಮೂದು ಮಾಡಿರುತ್ತಾರೆ. ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತು ಮೂಲತಃ ಸಿದ್ಧನಾಯ್ಕ ರವರಿಗೆ ಸೇರಿದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ಸಿದ್ಧನಾಯಕರಿಗೆ ಸೇರಿದ್ದು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವುದಿಲ್ಲ. ನಾನು ದಾವಾ ಷೆಡ್ಯೂಲ್ 1ನೇ ಐಟಂ ಸ್ವತ್ತಿನ ಚೆಕ್ಕುಬಂದಿಯನ್ನು ಹೇಳಬಲ್ಲೆ ಪೂರ್ವಕ್ಕೆ:-ಸಿದ್ಧನಾಯಕ ರವರು ಜಮೀನು, ಪಶ್ಚಿಮಕ್ಕೆ:-ಚಿಕ್ಕನಾಯಕ ಮತ್ತು ಪುಟ್ಟನಾಯಕ ರವರ ಜಮೀನು, ಉತ್ತರಕ್ಕೆ:-ಕೃಷ್ಣನಾಯಕ ರವರ ಜಮೀನು ಹಾಗೂ ದಕ್ಷಿಣಕ್ಕೆ:-ರುದ್ರಪ್ಪ ರವರ ಜಮೀನು ಇರುತ್ತದೆ. ನಾನು ಮೇಲೆ ಚೆಕ್ಕುಬಂದಿಯಲ್ಲಿ ಎಲ್ಲಿಯೂ ದಾರಿ ಎಂದು ನಮೂದಯಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾರಿ ಇರುತ್ತದೆ ಎಂದು ನುಡಿಯುತ್ತಾರೆ.

3. ನಾನು ದಿ.25-11-1972 ರ ಮೂಲ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಮೂಲ ಕ್ರಯ ಪತ್ರವು ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಮೂಲ ಕ್ರಯ ಪತ್ರವು ಏನಾಯಿತು ಎಂದು ನಮ್ಮ ವಾದ ಪತ್ರದಲ್ಲಾಗಲಿ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಚಿಕ್ಕನಾಯಕ ರವರು, ಚಿಕ್ಕನಾಯಕ ಬಿನ್ ಲೇ.ಮರಿಲಿಂಗಿ ದೇವನಾಯಕ ರವರ 5 ನೇ ಹೆಂಡತಿ ದೇವಮ್ಮ ರವರ ಮಗ ಎಂದು ತೋರಿಸಲು ತಹಶೀಲ್ದಾರ್ ರವರ ಕಚೇರಿಯಿಂದ ಯಾವುದೇ ವಂಶವೃಕ್ಷ ಪ್ರಮಾಣ ಪತ್ರವನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

4. ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕ ರವರ ಮೊದಲನೆ ಹೆಂಡತಿ ಹೆಸರು ಲಿಂಗಮ್ಮ, 2 ನೇ ಹೆಂಡತಿ ಹೆಸರು ದೇವರು, 3 ನೇ ಹೆಂಡತಿ ಹೆಸರು ಲಕ್ಷ್ಮಮ್ಮ, 4 ನೇ ಹೆಂಡತಿ ತಿಮ್ಮಮ್ಮ ಹಾಗೂ 5 ನೇ ಹೆಂಡತಿ ಹೆಸರು ದೇವಮ್ಮ ಆಗಿರುತ್ತಾರೆ. ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕ ರವರಿಗೆ 5 ಜನ ಪತ್ನಿಯರು ಇರುತ್ತಾರೆ ಎಂಬ ಬಗ್ಗೆ 1961 ರ ವಿಭಾಗ ಪತ್ರದಲ್ಲಿ ನಮೂದು ಆಗಿದ್ದು, ಸದರಿ ವಿಭಾಗ ಪತ್ರದ ಆಧಾರದ ಮೇರೆಗೆ ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕ ರವರಿಗೆ 5 ಜನ ಪತ್ನಿಯರು ಇರುತ್ತಾರೆ ಎಂದು ಹೇಳುತ್ತಿರುತ್ತೇನೆ. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-3 ರಲ್ಲಿ

ನಮೂದಾಗಿರುವ ತಿಮ್ಮಮ್ಮ ರವರು ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕನ 4 ನೇ ಹೆಂಡತಿ ಆಗಿರುತ್ತಾರೆ. ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕ ರವರಿಗೂ ನಮಗೂ ಯಾವುದೇ ಸಂಬಂಧ ಇರುವುದಿಲ್ಲ. ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕ ರವರಿಗೆ ಇಬ್ಬಾಜ್ಲ ಗ್ರಾಮದಲ್ಲಿ ಎಷ್ಟು ಎಕರೆ ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ.

5. ನನ್ನ ತಾತನವರು ಸಿದ್ಧನಾಯಕ ಬಿನ್ ಚಿಕ್ಕನಾಯಕ ರವರ ಭಾಗದ ಜಮೀನನ್ನು ಕ್ರಯಕ್ಕೆ ಪಡೆದಿದ್ದರು. ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕ ರವರಿಗೆ ವಿಭಾಗದಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತು ಬಂದಿದೆ ಎಂಬುದರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಚಿಕ್ಕನಾಯಕ ಬಿನ್ ಮರಿಲಿಂಗಿ ದೇವನಾಯಕ ರವರ ಮಗ ಸಿದ್ಧನಾಯಕ ರವರು ನನ್ನ ತಾತ ದೇವನಾಯಕ ರವರಿಗೆ ಯಾವ ಭಾಗದ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಚೆಕ್ಕುಬಂದಿಯ ಬಗ್ಗೆ ನಾನು ತಿಳಿಸಿದುಕೊಂಡಿರುವುದಿಲ್ಲ. 1961 ರಿಂದ ಇಲ್ಲಿಯವರೆಗಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ತಾತನವರು ಮರಣ ಹೊಂದಿ ಎಷ್ಟು ವರ್ಷಗಳಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ತಾತನನ್ನು ನೋಡಿದ್ದು ಆಗ ನಾನು ತುಂಬಾ ಚಿಕ್ಕವನು. ನನ್ನ ತಾತ ದೇವನಾಯಕ ರವರಿಗೆ ನನ್ನ ತಂದೆ ಒಬ್ಬನೇ ಮಗನಾಗಿರುತ್ತಾನೆ. ನನ್ನ ತಾತನವರ ಕುಟುಂಬದ ವಂಶವೃಕ್ಷವನ್ನು ನಾನು ಹಾಜರುಪಡಿಸಿರುವುದಿಲ್ಲ.

6. ದಾವಾ 1 ನೇ ಐಟಂ ಸ್ವತ್ತನ್ನು ನನ್ನ ತಾತನವರ ಮರಣಾ ನಂತರ ಪೌತಿ ಖಾತೆ ಮಾಡಿಸಿಕೊಂಡಿರುವ ವಿಚಾರ ಗೊತ್ತು. ನನ್ನ ವಾದ ಪತ್ರದ 1 ನೇ ಖಂಡಿಕೆಯಲ್ಲಿ ದೇವನಾಯಕ ರವರು ಅವರ ಮಕ್ಕಳ ಸಹಾಯದಿಂದ ವ್ಯವಸಾಯ ಮಾಡುತ್ತಿದ್ದರು ಎಂದು ತಿಳಿಸಿದ್ದು, ಈಗ ದೇವನಾಯಕ ರವರಿಗೆ ನನ್ನ ತಂದೆ ಒಬ್ಬನೇ ಮಗ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತು ಈಗ ದುರಸ್ಥಿ ಆಗಿರುತ್ತದೆ. ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತು

ದುರಸ್ಥಿ ಆಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತು ಎಷ್ಟು ವರ್ಷಗಳ ಹಿಂದೆ ದುರಸ್ಥಿ ಆಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತು ದುರಸ್ಥಿ ಆಗಿರುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

7. ದಾವಾ ಷೆಡ್ಯೂಲ್ 2 ನೇ ಐಟಂ ಸ್ವತ್ತನ್ನು 6 ನೇ ಪ್ರತಿವಾದಿಯವರು ಕ್ರಯಕ್ಕೆ ಪಡೆದಿರುತ್ತಾರೆ. 6 ನೇ ಪ್ರತಿವಾದಿಯವರ ಕ್ರಯಕ್ಕೆ ಪಡೆದಿರುವ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನೆಯೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ನಾನು ವಾದ ಪತ್ರದಲ್ಲಿ ದಾವಾ ಷೆಡ್ಯೂಲ್ 2 ನೇ ಐಟಂ ಸ್ವತ್ತಿನ ಚೆಕ್ಕುಬಂದಿಯನ್ನು ಕ್ರಯ ಪತ್ರದ ಆಧಾರದ ಮೇರೆಗೆ ನಮೂದು ಮಾಡಿದ್ದು, ಸದರಿ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ನಾನು ನೋಡಿರುವ ಕ್ರಯ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.139 ರ ಒಟ್ಟಾರೆ ವಿಸ್ತೀರ್ಣ ಸುಮಾರು 7 ಎಕರೆ ಇರಬಹುದು. ಸರ್ವೇ ನಂ.139 ಒಟ್ಟು ಎಷ್ಟು ಹಿಸ್ಸೆಗಳು ಆಗಿವೆ ಎಂದು ನನಗೆ ಗೊತ್ತಿಲ್ಲ.

8. ಪಹಣಿ ಪತ್ರಿಕೆ ಆಧಾರದ ಮೇರೆಗೆ ದಾವಾ ಷೆಡ್ಯೂಲ್ 3 ನೇ ಐಟಂ ಸ್ವತ್ತನ್ನು ನಮೂದು ಮಾಡಿದ್ದು, ಸದರಿ ಸ್ವತ್ತು 2 ನೇ ಪ್ರತಿವಾದಿಯ ಗಂಡ ಮತ್ತು 3 ರಿಂದ 5 ನೇ ಪ್ರತಿವಾದಿಯವರ ತಂದೆಯವರಾದ ಬೈರನಾಯಕ ರವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ 2 ನೇ ಸ್ವತ್ತಿನ ಪೂರ್ವಕ್ಕೆ ದೇವನಾಯಕ ಬಿನ್ ರಾಮನಾಯಕ ರವರ ಜಮೀನು ಎಂದು ನಮೂದಾಗಿದ್ದು, ಸದರಿ ಜಮೀನಿನ ಸರ್ವೇ ನಂಬರ್ ಎಷ್ಟು ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೇ ನಂ.139 ಆಗಿದ್ದು ಆದರೆ ಎಷ್ಟನೇ ಪೋಡು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೇವನಾಯಕ ರವರಿಗೆ ಸರ್ವೇ ನಂ.139 ರಲ್ಲಿ 2 ಪೋಡುಗಳು ಇರುತ್ತವೆ. ಅಂದರೆ ಸರ್ವೇ ನಂ.139/6 ಆಗಿದ್ದು, ಮತ್ತೊಂದು ಪೋಡಿನ ನಂಬರ್ ನನಗೆ

ಗೊತ್ತಿಲ್ಲ. ದೇವನಾಯಕ ರವರಿಗೆ ಸೇರಿದ ಮತ್ತೊಂದು ಜಮೀನಿನ ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಮತ್ತೊಂದು ಪೋಡನ್ನು ಈ ದಾವೆಯಲ್ಲಿ ಷೆಡ್ಯೂಲ್ ಆಗಿ ನಮೂದು ಮಾಡಿರುವುದಿಲ್ಲ. ಸರ್ವೇ ನಂ.139 ಎಷ್ಟು ಪೋಡಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಆರದೆ ಸರ್ವೇ ನಂ.139/1, 139/2, 139/3, 139/4 ಮತ್ತು 139/6 ಎಂದು ಪೋಡುಗಳು ಆಗಿರುವ ವಿಚಾರ ನನಗೆ ಗೊತ್ತು. ಸರ್ವೇ ನಂ.139 6 ನೇ ಪೋಡಿನ ನಂತರವು ಇದೇಯೇ, ಇಲ್ಲವೇ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ.

9. ದಾವಾ ಐಟಂ 2 ರ ಸ್ವತ್ತಿನ ಪಶ್ಚಿಮಕ್ಕೆ ಇರುವ ಚಿಕ್ಕನಂಜಯ್ಯ ರವರ ಜಮೀನಿನ ಸರ್ವೇ ನಂ.146 ಆಗಿರುತ್ತದೆ. ದಾವಾ ಐಟಂ 2 ರ ಸ್ವತ್ತಿನ ದಕ್ಷಿಣಕ್ಕೆ ಇರುವ ಬೈರನಾಯಕ ರವರ ಜಮೀನು ಸರ್ವೇ ನಂ.139/4 ಆಗಿರುತ್ತದೆ. ಸದರಿ ಸರ್ವೇ ನಂ.139/4 ಅನ್ನು ದಾವಾ 3 ನೇ ಐಟಂ ಸ್ವತ್ತಾಗಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ದಾವಾ 3 ನೇ ಐಟಂ ಸ್ವತ್ತಿನ ಉತ್ತರಕ್ಕೆ ದೇವನಾಯಕ ಮತ್ತು ರಾಮನಾಯಕ ರವರ ಜಮೀನು ಎಂದು ನಮೂದು ಆಗಿದ್ದು, ಹಾಗಾದರೆ ಅವುಗಳ ಸರ್ವೇ ನಂಬರ್ ಏನು ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೇ ನಂ.139/6 ಆಗಿದ್ದು, ದೇವನಾಯಕ ರವರ ತಂದೆ ಹೆಸರು ರಾಮನಾಯಕ ಎಂದು ನುಡಿಯುತ್ತಾರೆ. ಹಾಗಾದರೆ ದಾವಾ 3 ನೇ ಐಟಂ ಸ್ವತ್ತಿನ ಉತ್ತರಕ್ಕೆ ಕಾಣಿಸಿರುವ ದೇವನಾಯಕ ಮತ್ತು ರಾಮನಾಯಕ ರವರ ಜಮೀನು ಬೇರೆ ಬೇರೆ ಅಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**